

ಸಾಮಾಜಿಕ ಆಶಯಗಳ ಅಭಿವ್ಯಕ್ತಿಗೆ ಸಿನಿಮಾ ಮಾಧ್ಯಮ ಬಳಸಿಕೊಂಡ  ಬರಗೂರು ರಾಮಚಂದ್ರಪ್ಪ

ಕಣಗಾಲ್, ಸಿದ್ಧಲಿಂಗಯ್ಯ, ದೊರೈ–ಭಗವಾನ್, ಎಂ.ಆರ್. ವಿಠಲ್, ಬಿ.ಎಸ್. ರಂಗಾ ಅವರಂಥ ಮೇರು ನಿರ್ದೇಶಕರ ಕಲಾಕೃತಿಗಳು ತೆರೆಕಂಡು ಜನಮೆಚ್ಚುಗೆ ಪಡೆದವು. ರಾಜಕುಮಾರ್ ಅವರು ಕನ್ನಡದ ಸಾಂಸ್ಕೃತಿಕ ವ್ಯಕ್ತಿತ್ವವಾಗಿ ರೂಪುಗೊಂಡಿದ್ದು ಇದೇ ಸಮಯದಲ್ಲಿ. ಕಾದಂಬರಿ, ಸಣ್ಣಕಥೆಗಳು ಹಾಗೂ ಕವಿಗಳ ಕವನಗಳನ್ನು ಬಳಸಿಕೊಳ್ಳುವ ಮೂಲಕ ವ್ಯಾಪಾರಿ ಚಿತ್ರಗಳಿಗೆ ಸಾಹಿತ್ಯದ ಸ್ಪರ್ಶ ನೀಡುವ ಪ್ರಯೋಗಗಳೂ ನಡೆದವು. ಮದರಾಸಿನಲ್ಲಿ ನೆಲೆಗೊಂಡಿದ್ದ ಕನ್ನಡ ಚಿತ್ರರಂಗ ತನ್ನ ನೆಲೆಯನ್ನು ಬೆಂಗಳೂರಿಗೆ ಬದಲಿಸಿಕೊಂಡಿದ್ದ ದಿನಗಳವು. ಕರ್ನಾಟಕದಲ್ಲಿ ನೆಲೆ ಕಂಡುಕೊಳ್ಳಲು ಹಂಬಲಿಸುತ್ತಿದ್ದ ಕನ್ನಡ ಚಿತ್ರರಂಗ ಕನ್ನಡದ ಅಸ್ಮಿತೆಯನ್ನು ತನ್ನ ದ್ರವ್ಯವನ್ನಾಗಿ ಅದೆಷ್ಟು ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡಿತೆಂದರೆ, ಬೆಂಗಳೂರಿನಲ್ಲಿ ರೂಪುಗೊಂಡಿದ್ದ ಕನ್ನಡ ಚಳವಳಿಯ ಅವಿಭಾಜ್ಯ ಭಾಗವಾಗಿ ಚಿತ್ರರಂಗದ ತವಕತಲ್ಲಣಗಳೂ ಸೇರಿಕೊಂಡವು. ಈ ಕನ್ನಡಪ್ರಜ್ಞೆಗೆ ಪೂರಕವಾಗಿ ಅಂದಿನ ಕನ್ನಡ ಚಿತ್ರಗಳು ಕನ್ನಡ ಸಂಸ್ಕೃತಿಗೆ ಸಂವಾದಿಯೆನ್ನುವಂತೆ ರೂಪುಗೊಳ್ಳತೊಡಗಿದವು. ಅಂದರೆ, ಎಪ್ಪತ್ತರ ದಶಕದಲ್ಲಿನ ಕನ್ನಡ ಚಿತ್ರರಂಗದ ಹೊಸ ಅಲೆ ಕೇವಲ ಕಲಾತ್ಮಕ ಚಿತ್ರಗಳಿಗೆ ಸೀಮಿತವಾಗಿರಲಿಲ್ಲ. ವ್ಯಾಪಾರಿ ಚಿತ್ರಗಳ ದೃಷ್ಟಿಯಿಂದಲೂ ಅದು ಸ್ವರ್ಣಯುಗ.

ಎಪ್ಪತ್ತರ ದಶಕದ ಹೊಸ ಅಲೆ ನಂತರದ ಅವಧಿಯಲ್ಲೂ ಆಗಾಗ ತೆರೆಗಳ ರೂಪದಲ್ಲಿ ಮರುಕಳಿಸುತ್ತಲೇ ಇದೆ. ‘ತಿಥಿ’ಯ ರಾಮ್‌ರೆಡ್ಡಿ, ಈರೇಗೌಡ, ‘ರಾಮಾ ರಾಮಾ ರೇ’ ಚಿತ್ರದ ಸತ್ಯಪ್ರಕಾಶ್, ‘ಪೆದ್ರೊ’ದ ನಟೇಶ್ ಹೆಗ್ಡೆ, ‘ರೈಲ್ವೆ ಚಿಲ್ಡ್ರನ್’, ‘ಪಿಂಕಿ ಎಲ್ಲಿ?’, ‘ಹದಿನೇಳೆಂಟು’ ಸಿನಿಮಾಗಳ ಪೃಥ್ವಿ ಕೊಣನೂರು, ಸಾಹಿತ್ಯದ ಸಂವೇದನೆ ಹೊಂದಿರುವ ಯೋಗರಾಜ ಭಟ್, ಪಿ. ಶೇಷಾದ್ರಿ, ಸುಮನ್ ಕಿತ್ತೂರು, ಸೂರಿ, ಅನನ್ಯಾ ಕಾಸರವಳ್ಳಿ, ಬಿ.ಎಸ್. ಲಿಂಗದೇವರು, ಜಯತೀರ್ಥ – ಇಂಥ ನಿರ್ದೇಶಕರುಗಳೊಂದಿಗೆ ಹಿರಿಯರಾದ ಗಿರೀಶ ಕಾಸರವಳ್ಳಿ, ಬರಗೂರು ರಾಮಚಂದ್ರಪ್ಪನವರಂಥ ನಿರ್ದೇಶಕರು ಕನ್ನಡ ಸಿನಿಮಾದ ಹೊಸ ಅಲೆಯ ನೆನಪುಗಳ ನವೀಕರಣಕ್ಕೆ ಕಾರಣರಾಗಿದ್ದಾರೆ. ■

೧೮ ಕನ್ನಡ ಸಿನಿಮಾ

## ಗಿರೀಶ ಕಾಸರವಳ್ಳಿ: ಅಪೂರ್ವ ವಯ್ಯಾಕರಣಿ

ಆಯಾಮ ಏಳು

**ಸ್ವರ್ಣಕಮಲ** ಸಮ್ಮಾನ ಹಾಗೂ ದಲಿತ ಸಂವೇದನೆಯ ಪರಿಚಯದ ಕಾರಣಕ್ಕಾಗಿ ಕನ್ನಡ ಚಿತ್ರರಂಗದ ಅಪೂರ್ವ ಕಲಾಕೃತಿಗಳಲ್ಲೊಂದಾಗಿ ಗುರ್ತಿಸಲಾಗುವ ‘ಚೋಮನ ದುಡಿ’ಯ ಮತ್ತೊಂದು ಕೊಡುಗೆ ಗಿರೀಶ ಕಾಸರವಳ್ಳಿ. ಈ ಚಿತ್ರದಲ್ಲಿ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದ ಗಿರೀಶರು (ಟಿ.ಎಸ್. ನಾಗಾಭರಣ ಚಿತ್ರದ ಮತ್ತೊಬ್ಬ ಸಹ ನಿರ್ದೇಶಕ), ‘ಘಟಶ್ರಾದ್ಧ’ (1977) ಮೂಲಕ ಕನ್ನಡ ಚಿತ್ರರಂಗಕ್ಕೆ ಮೂರನೇ ಬಾರಿಗೆ ಸ್ವರ್ಣಕಮಲ ತಂದವರು. ‘ಸಂಸ್ಕಾರ’ ಹಾಗೂ ‘ಚೋಮನ ದುಡಿ’ಗಳನ್ನು ಹೊರತುಪಡಿಸಿದರೆ, ಸ್ವರ್ಣಕಮಲ ಪುರಸ್ಕಾರಕ್ಕೆ ಪಾತ್ರವಾದ ಉಳಿದ ನಾಲ್ಕೂ ಸಿನಿಮಾಗಳ ನಿರ್ದೇಶನ ಗಿರೀಶರದೇ (‘ತಬರನ ಕತೆ’, ‘ತಾಯಿಸಾಹೇಬ’ ಹಾಗೂ ‘ದ್ವೀಪ’).

ಗಿರೀಶ ಕಾಸರವಳ್ಳಿ ಅವರ ಸಿನಿಮಾಗಳು ಅಪ್ಪಟ ಕನ್ನಡ ಕಥನಗಳ ಉದಾಹರಣೆಗಳಾಗಿ ನಮ್ಮ ಮುಂದಿವೆ. ಗಿರೀಶರು ತಮ್ಮ ಸಿನಿಮಾಗಳಲ್ಲಿ ಜೀವಂತಗೊಳಿಸಿದ ಯಮುನಕ್ಕ, ನಾಗಿ, ಗುಲಾಬಿ, ಹಸೀನಾ, ಈರ್ಯ ಮುಂತಾದವರು ಕನ್ನಡ ನೆಲದ ಸತ್ವದಿಂದಲೇ ರೂಪುಗೊಂಡವರು. ಗಿರೀಶರ ಪಾಲಿಗೆ ಈ ಪಾತ್ರಗಳು ಹಾಗೂ ಅವು ಜೀವಿಸುವ ಭೂಮಿ ಒಂದೇ ನಾಣ್ಯದ ಎರಡು ಮುಖಗಳು. ಬಹುಶಃ, ಕನ್ನಡದ ಅಸ್ಮಿತೆಯನ್ನು ಇಷ್ಟು ಸೂಕ್ಷ್ಮವಾಗಿ ದೃಶ್ಯರೂಪದಲ್ಲಿ ಹಿಡಿದಿಟ್ಟ ಇತರ ಉದಾಹರಣೆಗಳು ಕನ್ನಡದಲ್ಲಿ ಬೆರಳೆಣಿಕೆಯನ್ನು ಮೀರುವುದಿಲ್ಲ. ಜಾಗತಿಕ ಮಟ್ಟದಲ್ಲಿ ಕನ್ನಡ ಚಿತ್ರಗಳೆಂದರೆ ಅವು ಗಿರೀಶ ಕಾಸರವಳ್ಳಿ ಅವರ ಸಿನಿಮಾಗಳೇ ಆಗಿವೆ. ಕನ್ನಡದ ಮೂಲಕ ಗಿರೀಶರೂ, ಗಿರೀಶರ ಮೂಲಕ ಕನ್ನಡ ಚಿತ್ರರಂಗವೂ ಬಹುದೊಡ್ಡ ಎತ್ತರಗಳನ್ನು ಕಂಡುಕೊಂಡಿವೆ.

ಗಿರೀಶರ ‘ಕನಸೆಂಬೊ ಕುದುರೆಯನೇರಿ’ ಚಿತ್ರ ಉತ್ತರ ಕರ್ನಾಟಕದ ಪರಿಸರ, ಭಾಷೆಯನ್ನು ಧ್ವನಿಪೂರ್ಣವಾಗಿ ಬಳಸಿಕೊಂಡಿದ್ದರೆ, ‘ಗುಲಾಬಿ ಟಾಕೀಸ್’ ಚಿತ್ರದಲ್ಲಿ ಕುಂದಾಪುರ ಪರಿಸರದ ಭಾಷೆ, ಅಲ್ಲಿನ ಮೀನುಗಾರರ ಬದುಕು ಮತ್ತು ಕರಾವಳಿಯ ಕಡಲಿನ ಪರಿಸರ ಅತಿರೇಕಗಳಿಲ್ಲದೆ ಚಿತ್ರಿತಗೊಂಡಿದೆ. ಕಾಸರವಳ್ಳಿಯವರು ಪ್ರಾದೇಶಿಕ ಭಾಷೆಯ ಮೂಲಕ ಪ್ರಾದೇಶಿಕ ಕಥನವೊಂದನ್ನು ಹೇಳಿದರೂ, ಅವರ ಸೃಜನಶೀಲ ಪ್ರತಿಭೆ

## ಮುಂಗಾರುಮಳೆ, ದುನಿಯಾ: ಹೊಸ ಬಣ್ಣಗಳು

ಆಯಾಮ ಎಂಟು



‘ಮುಂಗಾರು ಮಳೆ’ ಚಿತ್ರದಲ್ಲಿ ಗಣೇಶ್ ಮತ್ತು ಪೂಜಾ ಗಾಂಧಿ